ಅನುಭವಿಯಾದ ಅವನಿಗೆ ತಿಳಿದಿತ್ತು. ಆದರೆ ಹರಿಲಾಲ ಅವನ ಅನುಭವವನ್ನು ಮತ್ತೂ ಹೆಚ್ಚಿಸಿದ. ಹಸಿದ ಹರಿಲಾಲ ತಲೆಬಾಗಲಿಲ್ಲ. ಬ್ರಿಟಿಷ್ ಅಧಿಕಾರಿಯ ಗರ್ವ ಅಡಗಿತು. ಹರಿಲಾಲನ ಉಪವಾಸ ಸತ್ಯಾಗ್ರಹ ಮುಂದುವರೆದಂತೆ ಜೈಲು ಅಧಿಕಾರಿಯ ಕಳವಳ ಸಹ ಹೆಚ್ಚಿತು. ಒಂದು ವೇಳೆ ಈ ಸತ್ಯಾಗ್ರಹಿ ಹಸಿವೆಯಿಂದ ಜೈಲಿನಲ್ಲೇ ಸತ್ತರೆ, ಆಫ್ರಿಕಾದಲ್ಲಿರುವ ಭಾರತೀಯರ ಮಾತಿರಲಿ, ಆಂಗ್ಲ ಸರ್ಕಾರದ ಮಂತ್ರಿಗಳಿಗೂ ಉತ್ತರ ಕೊಡಬಹುದು, ಆದರೆ ಈ ಕಿಡಿ ಹಾರಿ ಹೋಗಿ ದೂರದ ವಿದೇಶಕ್ಕೂ ಹೋಗುವುದು. ಮಿಸ್ಟರ್ ಗಾಂಧಿ ಹಟಮಾರಿ, ಒಮ್ಮೆ ನಿರ್ಧರಿಸಿದ್ದನ್ನು ಕೊನೆಯವರೆಗೆ ಪಾಲಿಸುತ್ತಾನೆ ಎಂಬುದನ್ನು ಅಷ್ಟು ವರ್ಷಗಳ ತನ್ನ ಅನುಭವಗಳಿಂದ ಜೈಲುಅಧಿಕಾರಿ ಅರಿತಿದ್ದ.

ಏಳು ದಿನಗಳ ನಂತರ ಸರ್ಕಾರಿ ಅಧಿಕಾರಿಗಳು ಹರಿಲಾಲನನ್ನು ಬೇರೆ ಜೈಲಿಗೆ ವರ್ಗಾಯಿಸುವ ಆದೇಶವನ್ನು ಮಾಡಿದರು. ಹರಿಲಾಲ ಉಪವಾಸವನ್ನು ಕೈಬಿಟ್ಟ. ಜೈಲುಅಧಿಕಾರಿ ನೆಮ್ಮದಿಯಿಂದ ಉಸಿರಾಡಿದ.

ಹೊಸ ಜೈಲಿನಲ್ಲಿ ಹರಿಲಾಲ ಹೆಚ್ಚು ದಿನಗಳನ್ನು ಕಳೆಯಲಿಲ್ಲ. ಕೆಲವೇ ದಿನಗಳಲ್ಲಿ ಅವನನ್ನು ಬಿಡುಗಡೆ ಮಾಡಲಾಯಿತು. ಅವನು ಜೈಲಿನ ಉಡುಪುಗಳನ್ನು ಕಳಚಿ ತನ್ನ ಉಡುಪುಗಳನ್ನು ಧರಿಸಿದ. ಇಲ್ಲಿಂದ ಹೊರಟ ನಂತರ, ತಾನೀಗ ಫೀನಿಕ್ಸ್ ಆಶ್ರಮಕ್ಕೆ ಹೋಗಲೋ ಅಥವಾ ಮತ್ತೆ ಜೋಹಾನ್ಸ್‌ಬರ್ಗ್‌ಗೆ ಹೋಗಿ ಬಾಪೂ ಅವರ ಬಗ್ಗೆ ವಿಚಾರಿಸುವುದೋ ಎಂಬ ದ್ವಂದ್ವದಲ್ಲಿ ಸಿಲುಕಿದ. ಆದರೆ ಹೊರಗೆ ಬಂದಾಗ ತನ್ನನ್ನು ಭೇಟಿಯಾಗುವವರು ಕೂತಿರುವ ಕೊಠಡಿಗೆ ಬಂದಾಗ ಹರಿಲಾಲನಿಗೆ ಆಶ್ಚರ್ಯವಾಯಿತು. ಬಾಪೂ ಅವನನ್ನು ಕಾಯುತ್ತಿದ್ದರು! ಜೈಲಿನಿಂದ ಬಿಡುಗಡೆಯಾದ ಮಗನನ್ನು ಸ್ವಾಗತಿಸಲು ಸ್ವತಃ ಬಾಪೂ ಅವರು ಎದುರಿಗೆ ನಿಂತಿದ್ದರು. ಹರಿಲಾಲ ಗದ್ಗದಿತನಾಗಿ ಬಾಪೂ ಅವರ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ.

'ಹರಿ,' ಬಾಪೂ ಅವರು ಮಗನ ಬೆನ್ನನ್ನು ನೇವರಿಸುತ್ತಾ ಹೇಳಿದರು, 'ನೀನು ಜೈಲಿನಲ್ಲಿರುವಾಗ ಉಪವಾಸದ ವ್ರತವನ್ನು ಕೈಗೊಂಡೆ, ಯಶಸ್ಸನ್ನೂ ಕಂಡೆ, ಇದನ್ನು ನೋಡಿ ನನ್ನೆದೆ ಗರ್ವವನ್ನು ಅನುಭವಿಸುತ್ತಿದೆ. ನಾನು ನಿನ್ನಿಂದ ಬಯಸುವ ಶಿಕ್ಷಣ ಸಹ ಇದೇ ಆಗಿದೆ.'

ಹರಿಲಾಲ ಇದಕ್ಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ. ವಿದೇಶದ ಅಧ್ಯಯನಕ್ಕೆ ಹೋಗಲು ಬಾಪೂ ಅವರು ಛಗನ್‌ಲಾಲ್‌ನನ್ನು ಆಯ್ಕೆ ಮಾಡಿರುವ ವಿಷಯ ಅಕಸ್ಮಾತ್ ಅವನನ್ನು ಕುಟುಕಿತು.

'ಹರಿ, ನಾವಿಲ್ಲಿಂದ ಟಾಲ್‌ಸ್ಟಾಯ್ ಫಾರ್ಮ್‌ಗೆ ಹೋಗಬೇಕು,' ಬಾಪೂ ಹೇಳಿದರು, 'ಈಗ ಜೋಹಾನ್ಸ್‌ಬರ್ಗ್ ಹೋರಾಟದ ಕೇಂದ್ರವಾಗುತ್ತಿದೆ. ಸರ್ಕಾರ ಕೊಟ್ಟ ಮಾತುಗಳನ್ನು ಮೀರುತ್ತಿದೆ. ಇಲ್ಲಿಂದ ಫೀನಿಕ್ಸ್ ತುಂಬಾ ದೂರದಲ್ಲಿದೆ, ಅದಕ್ಕೇ ನಾವು ಇಲ್ಲಿಂದ ಇಪ್ಪತ್ತೊಂದು ಮೈಲು ದೂರದಲ್ಲಿ ಒಂದು ಹೊಸ ಆಶ್ರಮವನ್ನು ನಿರ್ಮಿಸುತ್ತಿದ್ದೇವೆ. ಫೀನಿಕ್ಸ್ ಸಹ ಈ ಹಿಂದಿನಂತೆಯೇ ತನ್ನ ಕೆಲಸಕಾರ್ಯಗಳನ್ನು ನಿರ್ವಹಿಸುವುದು, ಆದರೆ ಇನ್ನು ಟಾಲ್‌ಸ್ಟಾಯ್ ಫಾರ್ಮ್ ಹೋರಾಟದ ಕೇಂದ್ರವಾಗುವುದು...'

ಹರಿಲಾಲನಿಗೆ ಇದು ಹೊಸ ಸುದ್ದಿಯಾಗಿತ್ತು. ವಿಶಾಲ ಸ್ಥಳದಲ್ಲಿ ಟಾಲ್‌ಸ್ಟಾಯ್ ಫಾರ್ಮ್‌ನ್ನು ನಿರ್ಮಿಸಲಾಗಿತ್ತು. ಫೀನಿಕ್ಸ್‌ಗೆ ಹೋಲಿಸಿದರೆ ಇಲ್ಲಿಯ ಆಶ್ರಮವಾಸಿಗಳ ಸಂಖ್ಯೆ ಸಹ ಹೆಚ್ಚಿತ್ತು. ಚಿಕ್ಕಚಿಕ್ಕ ದಿಣ್ಣೆಗಳ ಮೇಲೆ ಹಳ್ಳಿಯ ಮನೆಗಳನ್ನು ನಿರ್ಮಿಸಲಾಗಿತ್ತು. ಹರಿಲಾಲ ಆಶ್ರಮಕ್ಕೆ ಹೋದಾಗ, ಅಲ್ಲಿಯ ವಾತಾವರಣವನ್ನು ಕಂಡು ಆಶ್ಚರ್ಯಗೊಂಡ. ಟಾಲ್‌ಸ್ಟಾಯ್ ಆಶ್ರಮದಲ್ಲಿ ಹಿಂದೂಸ್ತಾನದ ಎಲ್ಲಾ ಭಾಷೆಗಳ, ಧರ್ಮಗಳ ಮತ್ತು ಜನರಿದ್ದರು.

ಮೊದಲ ರಾತ್ರಿಯೇ ಹೆಂಡತಿ ಗುಲಾಬ ನಾಚಿಕೊಳ್ಳುತ್ತಾ ಹರಿಲಾಲನಿಗೆ ಹೇಳಿದಳು, 'ನೀವೀಗ ಇನ್ನೊಂದು ಮಗುವಿನ ತಂದೆಯಾಗುವವರಿದ್ದೀರಿ.'

ಹರಿಲಾಲ ಈ ಸುದ್ದಿಯನ್ನು ನಿರೀಕ್ಷಿಸಿರಲಿಲ್ಲ. ಈ ಸುದ್ದಿ ಒಮ್ಮೆಲೆ ಆಕಸ್ಮಿಕವಾಗಿತ್ತು. ತಾನೀಗ ಸಂತೋಷ ಪಡಬೇಕೋ, ಬೇಡವೋ ಎಂದು ಅವನು ನಿರ್ಧರಿಸದಾದ.

'ಸ್ವದೇಶದಿಂದ ನನ್ನ ತಂದೆಯವರ ಪತ್ರ ಬಂದಿದೆ.' ಗುಲಾಬ ವಿಶೇಷ ಸುದ್ದಿಯನ್ನು ಹೇಳಿದಳು, 'ಚಂಚಿಯ ಮೊದಲ ಬಾಣಂತನ ತವರು ಮನೆಯಲ್ಲಾಗಬೇಕಿತ್ತು, ಅದು ಆಗಲಿಲ್ಲ; ಅದಕ್ಕೇ ಎರಡನೆಯ ಬಾಣಂತನ ತವರಿನಲ್ಲೇ ಆಗಬೇಕು, ಅವಳನ್ನು ರಾಜಕೋಟಕ್ಕೆ ಕಳಿಸಿ ಅಂತ ಅವರು ಬರೆದಿದ್ದಾರೆ...'

'ಬಾ ಬಾಪೂ ಏನು ಹೇಳಿದರು?' ಹರಿಲಾಲ ಉತ್ಸುಕನಾದ.

'ಬಾಪೂ ಅವರು ತಂದೆಯ ಪತ್ರಕ್ಕೆ, 'ಸರಿಯಾದ ಜೊತೆಗಾರರು ಸಿಕ್ಕಾಗ ಚಂಚಿಯನ್ನು ಸ್ವದೇಶಕ್ಕೆ ಕಳುಹಿಸುವಂತೆ ಹಾಗೂ ಈ ಬಾಣಂತನ ಸ್ವದೇಶದಲ್ಲಾಗಲಿ ಎಂದು ಗುಲಾಬ ಹೇಳಿದ್ದಾಳೆ' ಎಂದು ಉತ್ತರಿಸಿದ್ದಾರೆ.'

'ಗುಲಾಬ, ನೀನು ಹೊರಟು ಹೋದರೆ ನಾನು ಮತ್ತೆ ಒಂಟಿಯಾಗುತ್ತೇನೆ' ಹರಿಲಾಲ ಕಳವಳಗೊಂಡ.

'ನಾನು ಶಾಶ್ವತವಾಗಿ ಹೋಗುತ್ತಿಲ್ಲ' ಗುಲಾಬ ಸಂತಸದಿಂದ ಹೇಳಿದಳು.

'ಮತ್ತೆ ನಾನು ಸದಾ ನಿಮ್ಮೊಂದಿಗೇ ಇದ್ದೇನೆ, ಸ್ವಾಮಿ'

'ಗುಲಾಬ, ಮಗು ಹುಟ್ಟಿದ ಕೂಡಲೇ ನಾನೂ ಸಹ ಸ್ವದೇಶಕ್ಕೆ ಮರಳಿ ಬರುತ್ತೇನೆ. ನಾನೀಗ... ಸ್ವದೇಶಕ್ಕೆ ಮರಳಿ ಹೋಗಬೇಕು...' ಹರಿಲಾಲ ಅಕಸ್ಮಾತ್ ಹೇಳಿದ. ಅವನ ಕಣ್ಣುಗಳೆದುರು ಇದ್ದಕ್ಕಿದ್ದಂತೆ ಗೋಂಡಲ್‌ನ ವಿದ್ಯಾರ್ಥಿ ನಿಲಯ, ರಾಜಕೋಟದ ಶಾಲೆ ಮತ್ತು ಮುಂಬೈನ ಎಸ್ಪಲೆನೆಡ್ ಶಾಲೆ ಎಲ್ಲವೂ ಮೂಡಿದವು.

ಕೆಲವು ದಿನಗಳನ್ನು ಟಾಲ್‌ಸ್ಟಾಯ್ ಆಶ್ರಮದಲ್ಲಿ ಕಳೆದ ನಂತರ ಹರಿಲಾಲ ಜೋಹಾನ್ಸ್‌ಬರ್ಗ್‌ಗೆ ಹೋದ. ಈಗ ಅವನ ಹೊಸ ಕಾರ್ಯಕ್ಷೇತ್ರ ವೃದ್ಧಿಸಿ ಜೋಹಾನ್ಸ್‌ಬರ್ಗ್, ಟಾಲ್‌ಸ್ಟಾಯ್ ಫಾರ್ಮ್ ಮತ್ತು ಫೀನಿಕ್ಸ್ ಆಶ್ರಮದವರೆಗೆ ವ್ಯಾಪಿಸಿತ್ತು.

ಜೋಹಾನ್ಸ್‌ಬರ್ಗ್‌ನಿಂದ ಟಾಲ್‌ಸ್ಟಾಯ್ ಫಾರ್ಮ್‌ವರೆಗಿನ ಇಪ್ಪತ್ತೊಂದು ಮೈಲುಗಳ ಅಂತರವನ್ನು ಕಾಲ್ನಡಿಗೆಯಲ್ಲಿಯೇ ಹೋಗುವಂತೆ ಬಹುತೇಕ ಆಶ್ರಮವಾಸಿಗಳಿಗೆ ನಿಯಮವನ್ನೇ ರೂಪಿಸಲಾಗಿತ್ತು. ರೈಲಿನ ದರವನ್ನು ಭರಿಸುವ ಸ್ಥಿತಿಯಲ್ಲಿ ಆಶ್ರಮವಿರಲಿಲ್ಲ. ಹರಿಲಾಲ ಸಹ ಕಾಲ್ನಡಿಗೆಯಲ್ಲಿಯೇ ಜೋಹಾನ್ಸ್‌ಬರ್ಗ್‌ನಿಂದ ಟಾಲ್‌ಸ್ಟಾಯ್ ಆಶ್ರಮಕ್ಕೆ ಬಂದುಹೋಗುತ್ತಿದ್ದ. ಮುಂಜಾನೆ ಕತ್ತಲಿರುವಂತೆಯೇ ಹೊರಡುತ್ತಿದ್ದ. ಐದು ಗಂಟೆಗಳ ಕಾಲ ನಡೆದು ಹೋಗುತ್ತಿದ್ದ. ಆಶ್ರಮ ಅಥವಾ ಜೋಹಾನ್ಸ್‌ಬರ್ಗ್ ತಲುಪುತ್ತಲೇ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದ, ಕೆಲಸಕ್ಕೆ ಕೊನೆಯೇ ಇರಲಿಲ್ಲ.

ಆ ದಿನಗಳಲ್ಲಿ ಹರಿಲಾಲನ ಆರೋಗ್ಯ ಉತ್ತಮವಾಗಿರಲಿಲ್ಲ. ಕೆಲಸದ ಹೊರೆ ಸಹ ಹೆಚ್ಚುತ್ತಿತ್ತು. ಹೋರಾಟ ಸಹ ಉಗ್ರ ರೂಪವನ್ನು ತಾಳುತ್ತಿತ್ತು.

ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿ ವಾಸಿಸುವವರ ಸಂಖ್ಯೆಯಲ್ಲೂ ಹೆಚ್ಚಳವಾಗುತ್ತಿತ್ತು. ಈ ನಡುವೆ ಜೋಹಾನ್ಸ್‌ಬರ್ಗ್ ಮತ್ತು ಫಾರ್ಮ್ ನಡುವೆಯ ಕಾಲ್ನಡಿಗೆಯ ಪ್ರಯಾಣವೂ ಸಹ ದಣಿವನ್ನುಂಟು ಮಾಡುತ್ತಿತ್ತು. ವ್ಯವಸ್ಥೆ ದಿನೇ ದಿನೇ ಸುಕ್ಕಾಗುತ್ತಿತ್ತು. ಹರಿಲಾಲ ಮಾರನೆಯ ದಿನ ಟಾಲ್‌ಸ್ಟಾಯ್ ಫಾರ್ಮ್‌ಗೆ ಹೋಗಲು ನಿರ್ಧರಿಸಿದ್ದ. ಹೀಗಾಗಿ ಜೋಹಾನ್ಸ್‌ಬರ್ಗ್‌ನಲ್ಲಿ ತನಗೆ ವಹಿಸಲಾಗಿದ್ದ ಕೆಲಸಗಳನ್ನು ಪೂರೈಸುವಲ್ಲಿ ಮಗ್ನನಾಗಿದ್ದ. ಸಂಜೆ ಕಳೆದಿತ್ತು. ಅಂಧಕಾರ ವ್ಯಾಪಿಸುತ್ತಿತ್ತು. ಕೆಲವು ಗಂಟೆಗಳ ಕಾಲ ನಿದ್ರಿಸುವ ಅವಕಾಶ ಸಿಕ್ಕರೆ, ಮುಂಜಾನೆ ಮೂರು ಗಂಟೆಗೇ ಎದ್ದು ಟಾಲ್‌ಸ್ಟಾಯ್ ಫಾರ್ಮ್‌ಗೆ ಹೋಗುವುದಾಗಿ ಯೋಚಿಸಿ, ಕೆಲಸಗಳನ್ನು ಮುಗಿಸುವುದರಲ್ಲಿ ತೊಡಗಿದ. ಬೆಳಿಗ್ಗೆಯಿಂದ ಒಂದು ತುತ್ತು ಅನ್ನವನ್ನು ಸಹ ತಿಂದಿರಲಿಲ್ಲ, ಹೊಟ್ಟೆಯಲ್ಲಿ ಹಸಿವೆ ತುಂಬಾ ಸಂಕಟಪಡಿಸುತ್ತಿತ್ತು. ಇನ್ನೇನು ಕಚೇರಿಯನ್ನು ಬಿಡುವ ಸಿದ್ಧತೆಯಲ್ಲಿದ್ದ, ಆಗಲೇ ಫೋನ್ ರಿಂಗಾಯಿತು. ಹರಿಲಾಲ ರಿಸೀವರ್ ಎತ್ತಿ ಕಿವಿಯ ಬಳಿಯಲ್ಲಿಟ್ಟುಕೊಂಡ. 'ಹಲೋ...' ಅತ್ತ ಕಡೆಯಿಂದ ಧ್ವನಿ ಕೇಳಿಸಿತು, 'ನಾನು ಜೋಹಾನ್ಸ್‌ಬರ್ಗ್‌ನ ಸರ್ಕಾರಿ ಆಸ್ಪತ್ರೆಯಿಂದ ಮೆಡಿಕಲ್ ಆಫೀಸರ್ ಮಾತನಾಡುತ್ತಿದ್ದೇನೆ. ನೀವು ಮಿಸ್ಟರ್ ಗಾಂಧಿಯವರ ಕಚೇರಿಯಿಂದ ಮಾತನಾಡುತ್ತಿದ್ದೀರಾ?'

'ಹೌದು,' ಹರಿಲಾಲ ಕಳವಳಗೊಂಡ, 'ನಾನು ಮಿಸ್ಟರ್ ಗಾಂಧಿಯವರ ಮಗ ಹರಿಲಾಲ ಗಾಂಧಿ ಮಾತನಾಡುತ್ತಿದ್ದೇನೆ.'

'ಗುಡ್' ಮತ್ತೆ ಧ್ವನಿ ಕೇಳಿಸಿತು, 'ಮಿಸ್ಟರ್ ಗಾಂಧಿ, ಎರಡು ದಿನಗಳ ಹಿಂದೆ ನಮ್ಮ ಆಸ್ಪತ್ರೆಗೆ ಭಾರತೀಯ ರೋಗಿಯೊಬ್ಬನನ್ನು ದಾಖಲು ಮಾಡಿಕೊಳ್ಳಲಾಗಿತ್ತು. ನಾವೆಷ್ಟೇ ಪ್ರಯತ್ನಿಸಿದರೂ, ಆ ದುರದೃಷ್ಟ ವ್ಯಕ್ತಿಯನ್ನು ಉಳಿಸಿಕೊಳ್ಳಲಾಗಲಿಲ್ಲ.